ವಿಜಯಲಕ್ಷ್ಮಿ ಕೆ.ಎಂ.

# ಧೈರ್ಯವೇ ಯಶಸ್ಸಿನ ದಾರಿ

ಒಂದು ಊರು. ಆ ಊರಿನ ಎಲ್ಲ ಜನರೂ ತಮ್ಮ ತಮ್ಮ ಹೊಲ ಗದ್ದೆಗಳ ಕೆಲಸ ಮಾಡುತ್ತ ಸುಖವಾಗಿಯೇ ಇದ್ದರು. ಆದರೆ, ಅದೊಂದು ದಿನ ರೈತರು ಹೊಲದಲ್ಲಿ ಕೆಲಸ ಮಾಡುತ್ತಿರುವಾಗ, ಕರ್ಕಶವಾಗಿ ಗುಟುರು ಹಾಕುವ ಹಾಗೆ, ಒಟ್ಟಿಗೇ ನಾಲ್ಕಾರು ಸಿಡಿಲು ಹೊಡೆದ ಹಾಗೆ, ಭಾರೀ ಶಬ್ದ ಕೇಳಿಸಿತು. ಶಬ್ದ ಎಷ್ಟು ಜೋರಾಗಿತ್ತೆಂದರೆ ಇಡೀ ಊರನ್ನು ಆವರಿಸಿ, ಪ್ರತಿಧ್ವನಿಸುವಂತಿತ್ತು. ಊರಿನವರೆಲ್ಲರೂ ತಮ್ಮ ಹೊಲಗದ್ದೆಗಳ ಕೆಲಸ ಬಿಟ್ಟು, ಕಿವಿ ಬಿಗಿಯಾಗಿ ಮುಚ್ಚಿಕೊಂಡು ಓಡಿದರು. ಓಡುತ್ತ ಓಡುತ್ತ ಅವರೆಲ್ಲ ಒಂದೆಡೆ ಸೇರಿದರು.

ಯಾವತ್ತೂ ಇಲ್ಲದ ಈ ಶಬ್ದ ಇವತ್ತು ಎಲ್ಲಿಂದ ಬಂತು ಎಂದು ಅವರೆಲ್ಲ ಚರ್ಚಿಸಿದರು. ರಣರಣ ಬಿಸಿಲಿನ ಕಾಲ. ಮೋಡವೇ ಇರಲಿಲ್ಲ. ಹಾಗಾಗಿ ಅದು ಗುಡುಗಿನ ಶಬ್ದವಾಗಿರಲಿಲ್ಲ. ಬೆಟ್ಟವೇ ಇಲ್ಲದ್ದರಿಂದ ಬೆಟ್ಟದಿಂದ ಕಲ್ಲು ಬಂಡೆ ಉರುಳಿದ ಶಬ್ದವೂ ಅದಾಗಿರಲಿಲ್ಲ. ಆ ಊರಿನಲ್ಲಿ ವಿದ್ಯುತ್ ಇರಲಿಲ್ಲ. ವಿದ್ಯುತ್‌ನ ಏರುಪೇರಿನಿಂದ ಆದ ಸದ್ದೂ ಆಗಿರಲಿಲ್ಲ. ಏನಿರಬಹುದು ಆ ಶಬ್ದ? ಏನು ಏನು? ಎಂದು ಎಲ್ಲರೂ ತಮ್ಮ ತಮ್ಮಲ್ಲೇ ಕೇಳಿಕೊಂಡರು. ಅವರಿನ್ನೂ ಮಾತಾಡಿಕೊಳ್ಳುತ್ತಿರುವಾಗಲೇ ಪುನಃ ಆ ಶಬ್ದ ಇನ್ನೂ ಜೋರಾಗಿ ಕೇಳಿಸತೊಡಗಿತು. ಧಡಲ್ಧಡಲ್ಧಡಲ್ಧಡಲ್ ಎಂಬ ಶಬ್ದದ ಅಬ್ಬರದಲ್ಲಿ ಒಬ್ಬರಿಗೊಬ್ಬರ ಮಾತಿರಲಿ ಕಿರುಚುವುದೂ ಕೇಳಿಸುತ್ತಿರಲಿಲ್ಲ. ಜನರೆಲ್ಲ ಹೆದರಿಬಿಟ್ಟರು. ಹತ್ತು ನಿಮಿಷಕ್ಕೆ ಶಬ್ದ ನಿಂತಿತು. ಆದರೆ ನಿಂತಿತು ಎಂದು ನೆಮ್ಮದಿ ಪಡುವ ಹೊತ್ತಿಗೆ ಮತ್ತೆ ಆ ಶಬ್ದ ಜೋರಾಗುತ್ತಿತ್ತು.

ಆ ಊರಿನಲ್ಲಿ ಜಯಣ್ಣ ತುಂಬ ಧೈರ್ಯವಂತ ಯುವಕನಿದ್ದ. ಅವನು ಈ ಶಬ್ದ ಎಲ್ಲಿಂದ ಬರುತ್ತಿದೆ ಎಂದು ಕಂಡುಕೊಳ್ಳಲು ಆ ಶಬ್ದದ ಜಾಡು ಹಿಡಿದು ಹೊರಟ. ಅವನು ಕಿವಿಗಳು ಕಿವುಡಾಗಬಾರದೆಂದು ಹತ್ತಿಯನ್ನು ತುಂಬಿ ತಲೆಯ ಸುತ್ತ ಮಫ್ಲರ್ ಕಟ್ಟಿಕೊಂಡು ನಡೆದ. ಆ ಊರಿನ ಹೊರಗೆ ಒಂದು ದೊಡ್ಡ ಪಾಳು ಬಿದ್ದ ಗುಹೆ ಇತ್ತು. ಈ ಕರ್ಕಶ ಶಬ್ದ, ಆ ಗುಹೆಯ ಒಳಗಿನಿಂದಲೇ ಬರುತ್ತಿದೆ ಎಂಬುದನ್ನು ತಿಳಿದ ಜಯಣ್ಣ. ಆದರೆ ಶಬ್ದ ಇನ್ನೂ ಜೋರಾಗಿದ್ದರಿಂದ ಅವನಿಗೆ ಗುಹೆಯ ಒಳಗೆ ಹೆಜ್ಜೆ ಇಡಲು ಆಗಲೇ ಇಲ್ಲ. ಕೂಗು ಕೆಲ ಕ್ಷಣ ನಿಂತಿತು. ಆಗ ಅವನು ನಿಂತಲ್ಲಿಂದಲೇ ಒಳಗೆ ಬಗ್ಗಿ ನೋಡಿದ.

ಗುಹೆಯ ಒಳಗೆ ಒಂದು ವಿಚಿತ್ರ ಪ್ರಾಣಿ ಕೂತಿತ್ತು. ಅದರ ಹೊಟ್ಟೆ ಗುಡಾಣದ ಹಾಗಿತ್ತು. ಬೆನ್ನಿನ ಮೇಲೆ ಒಂದು ಗೋಪುರವಿತ್ತು. ಅದು ಸಣ್ಣದೊಂದು ಬೆಟ್ಟದ ಹಾಗಿತ್ತು. ಅದರ ಕಣ್ಣುಗಳು ಅಗ್ಗಿಷ್ಟಿಕೆಯಲ್ಲಿ ಉರಿಯುವ ಕೆಂಡದ ಹಾಗೆ ಕೆಂಪಗೆ ನಿಗಿ ನಿಗಿ ಉರಿಯುತ್ತಿದ್ದವು. ಎರಡು ಕೈಗಳು ಲೈಟ್ ಕಂಬಗಳಂತೆ ನೀಳವಾಗಿದ್ದವು. ಮುಖವಂತೂ ಘೇಂಡಾಮೃಗದ ಮುಖದಂತಿತ್ತು. ಅದಕ್ಕೆ ನಾಲ್ಕು ಕಾಲುಗಳಿದ್ದವು. ಅವು ಆನೆಯ ಕಾಲುಗಳಂತೆ ದುಂಡಗೆ ದಪ್ಪವಾಗಿದ್ದವು. ಜಯಣ್ಣ ಇಣುಕಿದ ತಕ್ಷಣ ಆ ಪ್ರಾಣಿಗೆ ಕೋಪ ಬಂದಿತು. ಆದರೂ ಜಯಣ್ಣ ಧೈರ್ಯವಾಗಿ ಗುಹೆಯ ಹೊರಗಡೆಯೇ ನಿಂತು ಆ ಪ್ರಾಣಿಯನ್ನು ಕೇಳಿಕೊಂಡ, ‘ಓ, ಪ್ರಾಣಿಯೇ

